ಬಿ.ಆರ್. ಮನೋಹರ ಶೇಟ್, ಬೆಂಗಳೂರು

*ಇಂದಿನ ಯುವ ಜನಾಂಗ 'ಗುರು', 'ಗುರಿ'ಯೆಡೆ ಗಮನಿಸದೆ 'ಗುಂಡು', 'ತುಂಡಿ'ನ ತುಡಿತದಲ್ಲಿರುವುದಲ್ಲಾ....?*



ಆದ್ದರಿಂದಲೇ ಸಮಾಜಕ್ಕೆ 'ಕುರು', ಪುಢಾರಿಗೆ 'ಕುರಿ' ಆಗಿದ್ದಾರೆ; 'ಮದ್ಯವಯಸ್ಸು' ದಾಟಿದರೆ ಸರಿಹೋಗುವುದಂತೆ.

ಪಿ.ಎನ್. ಶ್ರೀವತ್ಸ, ಬೆಂಗಳೂರು

*ಕಣ್ಣು, ಕಿವಿ, ಮೂಗಿಗೆ ಇರುವಂತೆ ನಾಲಿಗೆಗೂ ಆಸ್ಪತ್ರೆಗಳು ಇದ್ದಿದ್ದರೆ ಚೆನ್ನಿತ್ತಲ್ಲವೆ?*

ಇವೆಯಲ್ಲ ಉಚ್ಚಾರಣೆ ಶುದ್ಧಗೊಳಿಸುವ ಟಂಗ್ ಟ್ವಿಸ್ಟರ್‌ಗಳೇ ನಾಲಿಗೆಯ ಅತ್ಯುತ್ತಮ ಆಸ್ಪತ್ರೆಗಳು.

ಎಚ್.ಆರ್. ಪ್ರಕಾಶ್, ಶಿವಮೊಗ್ಗ

*ಬಲು ಸಿಟ್ಟಿನ ಹೆಣ್ಣು ಇದು. ಯಾವ 'ಷಟ್ಪದಿ' ಸಾರ್?*

ದುರುದುರು ನೋಡುತ ಬಿರುನುಡಿ ಬಾಣವ ತೂರಿಪ ಶರಷಟ್ ಪದಿಯದುವೇ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

*ದೀಪದ ಕೆಳಗೆ ಕತ್ತಲೇಕೆ ಸಾರ್?*



ಇಂತಹ ಕತ್ತಲನ್ನು ಹೋಗಲಾಡಿಸಿದ್ದೇನೆಂದು ಜಗಕ್ಕೆ ತೋರಿಸಲು ಬೆಳಕಿಗೆ ಕತ್ತಲಿನ ಸ್ನ್ಯಾಪ್‌ಶಾಟ್ ಬೇಕಲ್ಲ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

*ಕಿವಿ ಕೇಳಿದ್ದನ್ನೂ, ಕಣ್ಣು ಕಂಡದ್ದನ್ನೂ ಸಂಪೂರ್ಣ ನಂಬಬಾರದಂತೆ, ಹೌದಾ ಸಾರ್?*

ವಾಹಿನಿಗಳ ಸುಳ್ಳಿನ ಸರಪಳಿಯನ್ನು ಆಲಿಸಿ, ವೀಕ್ಷಿಸಿಯೂ ಈ ಪ್ರಶ್ನೆ ಕೇಳುವುದೇ, ಅಕಟಕಟಾ!

ಎ. ಕೃಷ್ಣಾನಂದ ಶೆಟ್ಟಿ, ಮುಲ್ಕಿ

*ಸಿನಿಮಾಗಳಲ್ಲಿ ಪೊಲೀಸರು ಹೆಣ ನೋಡುವಾಗ ತಲೆಯ ಕ್ಯಾಪ್ ತೆಗೆದು ಕಂಕುಳಲ್ಲಿ ಇಟ್ಟುಕೊಳ್ಳಲು ಕಾರಣ?*

ಸಾವಿನ ಕಾರಣವೇನಿರಬಹುದೆಂದು ತಲೆ ಕೆರೆದುಕೊಳ್ಳಲು ಕ್ಯಾಪ್ ಅಡ್ಡಿ ಬರದಿರಲೆಂದು.

ಕೆ.ಎಂ. ವಿಭೂತಿ, ಹರಿಹರ

*ಚುನಾವಣಾ ಸಮಯದಲ್ಲಿ ಮುಖಂಡರು ತಮ್ಮ ಮಾನವನ್ನು ಅಡವಿಟ್ಟಂತೆ ಮಾತನಾಡುವುದು ಏಕೆ?*

ಆ ಸಮಯದಲ್ಲಿ ಇಲ್ಲದಿರುವುದನ್ನೇ ಮಾತನಾಡುವುದಲ್ಲವೆ... ಮಾನ ಇಲ್ಲ, ಇದೆಯೆಂದು ಮಾತನಾಡುತ್ತಾರೆ!

ರವಿ ಎಂ. ಪೈ, ಹೊನ್ನಾವರ

*ಹಿರಿಯರಿಲ್ಲದ ಮನೆ ದೇವರಿಲ್ಲದ ಗುಡಿಯಂತೆ. ಏಕೆ?*

ಮನೆ ಅಸ್ತವ್ಯಸ್ತವಾಗಿ ಇಟ್ಟುಕೊಳ್ಳುವುದಲ್ಲದೆ ಮನೆಯೆಲ್ಲ ಚಪ್ಪಲಿ ಹಾಕಿಕೊಂಡು ಓಡಾಡುತ್ತಾರಲ್ಲ!

ನಾರಾಯಣ ಯಾಜಿ, ಶಿರಾಲಿ

*ದಂಪತಿಗಳಿಬ್ಬರೂ ಹಿರಿಯ ನಾಗರಿಕರಾಗುತ್ತಿರುವ ಸಂದರ್ಭದಲ್ಲಿ ರಸಿಕ ಪತಿಗೆ ಪತ್ನಿ ಮೈ ಮುಟ್ಟಲು ಬಿಡದಿದ್ದರೆ ಅವನ ಗತಿ?*

ಹ್ಹ! ಇಬ್ಬರ ದೇಹವೂ ಹಾಳು ಹಂಪೆ; ಗತ ವೈಭವದ ಸ್ಮರಣೆಯಲ್ಲಿ ತೃಪ್ತರಾಗುವುದೊಂದೇ ಮಾರ್ಗ.

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಪೂಜಾರಿಯ ಜುಟ್ಟಿಗೂ, ದೇವರ ಪೂಜೆಗೂ ಎಂತಹ ಸಂಬಂಧ?*

'ಚಾಮರಂ ಸಮರ್ಪಯಾಮಿ' ಎಂದಾಗ ಚಾಮರವಿರದಿದ್ದರೆ ಜುಟ್ಟು ಆಡಿಸಿಯೇ ಗಾಳಿ ಹಾಕಬಹುದೇನೋ.

ಅಮರಯ್ಯಾ ಪತ್ರಿಮಠ, ಸುರಪುರ

*ತ್ರಿಲೋಕ ಸಂಚಾರಿ ನಾರದರು ಏಕೆ ಬ್ರಹ್ಮಚಾರಿಗಳಾಗಿದ್ದರು?*

'ಮುಂದಿನ ಊರಿನಲ್ಲಿ ಮತ್ತಷ್ಟು ಸುಂದರವಾದವಳು ಸಿಗಬಹುದು' ಎಂದು ಹುಡುಕುತ್ತಲೇ ವಯಸ್ಸಾಗಿಬಿಟ್ಟಿತಂತೆ.

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು

*ಶಾಂತಿ ಸ್ಥಾಪನೆಗೆ ಮುಖ್ಯ ಯಾವುದು?*

ಶಾಂತಿಗೆ ಮುಂಚಿನ ಜಗಳ.

## ಬಹುಮಾನಿತ ಪ್ರಶ್ನೆ

ರಮೇಶ ಜ. ಬೊಂಗಾಳೆ, ಬೈಲಹೊಂಗಲ

*ಮನುಷ್ಯ ಒಂದೇ ಕಡೆ ಇರುವಂತಿದ್ದರೆ ಏನಾಗುತ್ತದೆ ಸಾರ್?*

ಹುತ್ತ ಬೆಳೆದು ದೊಡ್ಡ ರಾಮಾಯಣವೇ ಸೃಷ್ಟಿಯಾಗಿಬಿಡುತ್ತದೆ.

ನರಸಿಂಹ ಪೈ, ಕಾಸರಕೋಡ

*ವನಮಹೋತ್ಸವವನ್ನು ಮಳೆಗಾಲದಲ್ಲೇ ಏಕೆ ಆಚರಿಸುತ್ತಾರೆ?*

ಬೇಸಿಗೆಯಲ್ಲಿ ಆಚರಿಸಿದರೆ ಅದು ಒಣ ಮಹೋತ್ಸವ ಆಗುವುದರಿಂದ.

ಕೊಟ್ಟೂರು ಜವಳಿ ಜಯ್ಯಣ್ಣ, ದಾವಣಗೆರೆ

*ಗಾಡ್ ಫಾದರ್‌ಗೂ, ಫಾದರ್‌ಗೂ ಏನು ವ್ಯತ್ಯಾಸ?*

ಒಂದು ಲಾಜಿಕಲ್, ಇನ್ನೊಂದು ಬಯಲಾಜಿಕಲ್.

ಕೆ.ಹೆಚ್.ಆರ್.ಕೆ. ರೆಡ್ಡಿ, ಬೆಂಗಳೂರು

*ಮೊಬೈಲ್ ಫೋನ್ ಇಲ್ಲದಿದ್ದರೆ ಹುಡುಗ/ಹುಡುಗಿಯರಿಗೆ ಬ್ರೈನ್ ಕೆಲಸ ಮಾಡುವುದಿಲ್ಲವಂತೆ?*



ನಿಜ. ಈಗಿನ ಯುವಕರ ಬ್ರೈನ್ ಅವರ ತಲೆಯಲ್ಲಿಲ್ಲ, ಬೆರಳುಗಳಲ್ಲಿದೆ.

ಅಂಬಿಕಾ ಮಂಜುನಾಥಸ್ವಾಮಿ, ಭದ್ರಾವತಿ

*ಪುಢಾರಿಗಳ ಶೈಕ್ಷಣಿಕ ಅರ್ಹತೆಯನ್ನು ಪ್ರಶ್ನಿಸುವಷ್ಟು ಪ್ರಬುದ್ಧತೆ ನಮ್ಮಲ್ಲಿ ಬಂದರೆ ಏನಾಗಬಹುದು?*

ಪುಢಾರಿಗಳು ಹೆಚ್ಚು ಹೆಚ್ಚು ನಕಲಿ ಸರ್ಟಿಫಿಕೇಟುಗಳನ್ನು ಸೃಷ್ಟಿಸಬಹುದು.

ಮಲ್ಲಿಕಾ ಎ.ಹೆಚ್. ಬಗಲಿ, ಜತ್ತ

*ನಾ ಮೆಚ್ಚಿದ ಹುಡುಗನನ್ನೇ ವರಿಸಲೋ, ಹಿರಿಯರು ಸೂಚಿಸಿದ ಹುಡುಗನನ್ನೇ ವರಿಸಲೋ?*

ಅದು ಮುಖ್ಯವಲ್ಲ; ವರ ಕುವರನೋ, ಕು ವರನೋ ನೋಡಿ ವರಿಸಿದರೆ worry ಇರದು.

■ ರಾಮ್